




# ತಂಜಾವೂರಿನಲ್ಲಿ ರಾಮಕೃಷ್ಣ ಮಠದ ಉದ್ಘಾಟನೆ

ಚೆನ್ನೈ ರಾಮಕೃಷ್ಣ ಮಠದ ಉಪ-ಕೇಂದ್ರವಾಗಿ ತಮಿಳುನಾಡಿನ ಐತಿಹಾಸಿಕ ನಗರವಾದ ತಂಜಾವೂರಿನಲ್ಲಿ ಆರಂಭವಾಗಿರುವ ರಾಮಕೃಷ್ಣ ಮಠದ ಉದ್ಘಾಟನೆಯು ೨೦೨೦ರ ಆಗಸ್ಟ್ ೨೨ರಂದು ನೆರವೇರಿತು.



ತಂಜಾವೂರು ಸಮೀಪದ ಮಾರಿಯಮ್ಮನ್ ದೇವಾಲಯದಲ್ಲಿ ಇರುವ **'ರಾಮಕೃಷ್ಣ-ವಿವೇಕಾನಂದ ಎಜುಕೇಶನ್ ಟ್ರಸ್ಟ್'** ಕಳೆದ ೨೬ ವರ್ಷಗಳಿಂದ ಹಲವು ಗ್ರಾಮೀಣ ಪ್ರದೇಶಗಳಲ್ಲಿ ಸೇವಾಕಾರ್ಯಗಳನ್ನು ನಡೆಸುತ್ತ ಬಂದಿದೆ. ಇತ್ತೀಚೆಗೆ ಇದನ್ನು ರಾಮಕೃಷ್ಣ ಮಠ ಹಾಗು ಮಿಷನ್ನಿಗೆ ಸೇರಿಸಲಾಯಿತು. ಜುಲೈ ೨೦೧೯ರಿಂದ ಈ ಕೇಂದ್ರವು ಚೆನ್ನೈ ರಾಮಕೃಷ್ಣ ಮಠದ ಉಪ-ಕೇಂದ್ರವಾಗಿ ಕಾರ್ಯ ನಿರ್ವಹಿಸಲು ಆರಂಭಿಸಿದೆ.

ಉದ್ಘಾಟನಾ ಸಮಾರಂಭದಲ್ಲಿ ಗಣಪತಿ ಹೋಮ, ಭಜನೆ, ಕುಂಕುಮಾರ್ಚನೆ ಹಾಗೂ ಆಧ್ಯಾತ್ಮಿಕ ಪ್ರವಚನ ಇತ್ಯಾದಿ ಕಾರ್ಯಕ್ರಮಗಳು ನಡೆದವು. ಸುಮಾರು ೨೫೦ ಮಂದಿ ಭಕ್ತರು ಹಾಗೂ ೧೫ ಮಂದಿ ಸಂನ್ಯಾಸಿಗಳು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡರು. ರಾಮಕೃಷ್ಣ ಮಹಾಸಂಘದ ಉಪಾಧ್ಯಕ್ಷರಲ್ಲಿ ಒಬ್ಬರೂ, ಚೆನ್ನೈ ರಾಮಕೃಷ್ಣ ಮಠದ ಅಧ್ಯಕ್ಷರೂ ಆದ ಶ್ರೀಮತ್ ಸ್ವಾಮಿ ಗೌತಮಾನಂದಜಿ ಮಹಾರಾಜ್ ಅವರು ವಿಡಿಯೋ ಕಾನ್ಫರೆನ್ಸ್ ಮೂಲಕ ಆಶೀರ್ವಚನ ನೀಡಿದರು. ಸಾಯಂಕಾಲ ರೈತರಿಗೆ ಬಿತ್ತನೆಗಾಗಿ ಸಾಂಪ್ರದಾಯಿಕ ಭತ್ತವನ್ನು ಹಂಚಲಾಯಿತು. ನಮ್ಮ ಸಾಂಪ್ರದಾಯಿಕ ಹಾಗೂ ಸಾಂಸ್ಕೃತಿಕ ಕೃಷಿ ಪದ್ಧತಿಯನ್ನು ಪುನರುಜ್ಜೀವನಗೊಳಿಸಿ, ಉಳಿಸುವುದಕ್ಕಾಗಿ ಈ ವಿಶಿಷ್ಟ ಕಾರ್ಯಕ್ರಮವನ್ನು ಈ ಸಂದರ್ಭದಲ್ಲಿ ನಡೆಸಲಾಗಿತ್ತು.






Managing Editor : Swami Muktidananda
Editor : Swami Jnanayogananda
Printed and Published by Swami Muktidananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020